

ಹುತ್ತಕ್ಕೆ ಜೇನು ಹುಟ್ಟು ಹುಡುಕುತ್ತಾ ಸಾಗುವ ಯೋಗಿ ಈತ. ವರ್ಷದ ಎರಡು ತಿಂಗಳು ಈ ನಗರದ ರಾಜಬೀದಿಯಲ್ಲಿ ತಾನು ಸಾಕಿದ ಆನೆಗಳ ಹಿಂದೆ ಕಕ್ಕ ಮಾಡುವ ಮಕ್ಕಳ ಹಿಂದೆ ಮಮತೆಯಿಂದ ಸಾಗುವ ತಾಯಿಯ ಹಾಗೆ ಸಾಗುತ್ತಿರುತ್ತಾನೆ. ದಸರಾ ಕೊನೆಯ ದಿನದ ಜಂಬೂ ಸವಾರಿಯಲ್ಲೂ ಈತ ಹೀಗೆ ರಾಜ ಮರ್ಯಾದೆಯ ಗೌನು ತೊಟ್ಟು ಆದರೂ ಮೂಗಿನಲ್ಲಿ ಏನೋ ಒಂದು ಪರಿಮಳ ಹಿಡಿದುಕೊಂಡು ತನ್ನ ಹೆಣ್ಣಾನೆಯ ಹಿಂದೆ ನಡೆಯುತ್ತಿರುತ್ತಾನೆ. ‘ಏನು ಸಾರ್ ಬಳ್ಳೆಗೆ ಬಂದ್ರೆ ನೀವೂ ಕಾಡು ಮನುಷ್ಯ ನಾನೂ ಕಾಡು ಮನುಷ್ಯ. ಇಲ್ಲಿ ನಾನೂ ರಾಜಾ ನೀವೂ ರಾಜಾ’ ಎಂದು ಕಣ್ಣು ಮಿಟುಕಿಸುತ್ತಾನೆ. ಸುಮ್ಮನೆ ಇರಲಿ ಎಂದು ನಾನು ಅವನು ಕಣ್ಣು ಮಿಟುಕಿಸುವ ಇನ್ನೊಂದು ಫೋಟೊ ತೆಗೆಯುತ್ತೇನೆ.

‘ಏನು ಸಾ ನೀವೊಂದು ಎಷ್ಟು ಫೋಟೊ ಹೊಡೀತೀರಾ’ ಎಂದು ಆತ ನಾಚುತ್ತಾನೆ.